ದಿನಾಂಕಃ **05.07.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ.ಬಿ. ಎಂ. ಆರ್ ವಕೀಲರಿಂದಃ</u>

ನಾನು **5** ನೇ ತರಗತಿಯವರೆಗೂ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ನನ್ನ ಗಂಡನ ಒಟ್ಟು ಕುಟುಂಬದ ಆಸ್ತಿಗೆ ಸಂಬಂಧ ಪಟ್ಟಂತೆ ಓ.ಎಸ್. **942/1994** ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆ ರಾಜಿ ಮುಖಾಂತರ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ, **18** ಎಕರೆ ಡಿಕ್ರಿಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾ. ಸದರಿ ರಾಜಿ ಡಿಕ್ರಿಯಂತೆ ನಾವು ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ. **70, 71** ಕ್ಕೆ ಈ ದಾವೆಯನ್ನು ಹೂಡಿರುತ್ತೇನೆ. ನಾನು ಕೇವಲ ನಮ್ಮ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತೇನೆ. ಸರ್ವೆ ನಂ. **70** ರಲ್ಲಿ ಮುಕ್ಕಾಲು ಎಕರೆ ಜಮೀನಿಗೆ ದಾವೆ ಹೂಡಿರುತ್ತೇನೆ. ಸರ್ವೆ ನಂ. **71** ರಲ್ಲಿ **18** ಎಕರೆ ಜಮೀನಿಗೆ ದಾವೆ ಹೂಡಿರುತ್ತೇನೆ. ಇದನ್ನು ಹೊರತುಪಡಿಸಿ ನಾನು ಬೇರೆ ಆಸ್ತಿಗಳಿಗೆ ದಾವೆಯನ್ನು ಹೂಡಿರುವುದಿಲ್ಲ.

ಓ.ಎಸ್. **942/1994** ರಾಜಿ ಮುಖಾಂತರ **2000** ನೇ ಸಾಲಿನಲ್ಲಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ನನ್ನ ವಿರುದ್ಧ ಓ.ಎಸ್. **424/2016** ಅನ್ನು ನನ್ನ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡಬಾರದೆಂದು ಸದರಿ ದಾವೆಯಲ್ಲಿ ತೀರ್ಪು ಮತ್ತು ಡಿಕ್ರಿಯಾಗಿರುತ್ತದೆ ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

O.S.80/2020
PW-1

ಸಾಕ್ಷಿ ಸಹಿಃ